ಓಎಸ್ 13/2017

**ಪಿ.ಡಬ್ಲ್ಯೂ: 02.**

ದಿನಾಂಕಃ 16.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ವಾದಿ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ**

ಸರ್ವೆ ನಂ.41 ರಲ್ಲಿ ಒಟ್ಟಾಗಿ 100 ಕ್ಕಿಂತ ಹೆಚ್ಚು ಎಕರೆ ಜಮೀನಿರುತ್ತದೆ. ನನಗೆ ದಾವಾ ಜಮೀನನ್ನು ಹೊರತುಪಡಿಸಿ ಸರ್ವೆ ನಂ.41/3 ರಲ್ಲಿ 26 ಗುಂಟೆ ಇರುತ್ತದೆ. ಅದರ ಪೂರ್ವಕ್ಕೆ ದಾವಾ ಜಮೀನು, ಪಶ್ಚಿಮಕ್ಕೆ ಕೃಷ್ಣರಾಜೇ ಅರಸ್ ರವರ ಜಮೀನು, ದಕ್ಷಿಣಕ್ಕೆ ಮರಿಮಲ್ಲಪ್ಪರವರ ಜಮೀನು, ಉತ್ತರಕ್ಕೆ ಗುರುಸಿದ್ದಯ್ಯರವರ ಜಮೀನು. ದಾವಾ ಜಮೀನು ಹಾಗೂ ಸರ್ವೆ ನಂ.41/3 ನ್ನು ಹೊರತುಪಡಿಸಿ ಇನ್ಯಾವುದೇ ಜಮೀನು ನನಗೆ ಸೇರಿರುವುದಿಲ್ಲ ಎಂದರೆ ಸರಿ. ದಾವಾಸ್ತಿಗೆ ಸಂಬಂಧಪಟ್ಟಂತೆ ಚೆಕ್ಕುಬಂಧಿ ದೃಡೀಕರಣ ಪತ್ರವನ್ನು ನೀಡಿರುತ್ತೇನೆ. ಸರ್ವೆ ನಂ.41/3 ಕ್ಕೆ ನೀಡಿರುವುದಿಲ್ಲ. ನೀವು ಹೇಳುವ ಹಾಗೆ ಸದರಿ ಚೆಕ್ಕುಬಂಧಿಯಲ್ಲಿ ಯಾವ ಭೂಮಿಯೂ ಇರುವುದಿಲ್ಲ, ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಡಿ1 ನ್ನು ಸಾಕ್ಷಿಗೆ ತೋರಿಸಲಾಗಿ ಸರ್ವೆ ನಂ.41 ರಲ್ಲಿ ಒಟ್ಟು 139 ಎಕರೆ 24 ಗುಂಟೆ ಇರುತ್ತದೆ, ಅದರಲ್ಲಿ ದಾವಾ ಸ್ವತ್ತು ಇರುವುದು ಎಂದರೆ ಸರಿ. ನಿಡಿ1 ರಲ್ಲಿರುವ ಭೂಮಿಯನ್ನು ಹೊರತುಪಡಿಸಿ ಇನ್ಯಾವುದೇ ಬೇರೆ ಭೂಮಿಗೂ ನನಗೂ ಸಂಬಂಧವಿಲ್ಲ ಎಂದರೆ ಸರಿ. ನೀವು ಪ್ರತಿವಾದಿಗೆ ಸೇರಿರುವ ಭೂಮಿಗೆ ಹೋಗಿ ಅವರಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಬ್ಯಾಂಕ್ ನಿಂದ ಖರೀದಿ ಮಾಡುವ ಮುನ್ನ ಹನುಮಯ್ಯನವರಿಗೆ ಮಂಜೂರಾಗಿತ್ತು. ನಾನು ಹನುಮಯ್ಯನವರಿಗೆ ಯಾವ ವರ್ಷದಲ್ಲಿ ಮಂಜೂರಾಗಿದೆ ಎಂಬ ದಾಖಲಾತಿಯನ್ನು ಪಡೆದಿರುತ್ತೇನೆ. ದಾಖಲಾತಿಗಳೆಂದರೆ ಮಂಜೂರಾತಿ ಪತ್ರ, ಪಹಣಿ ಹಾಗೂ ಸ್ಕೆಚನ್ನು ಪಡೆದಿರುತ್ತೇನೆ. ನಾನು ಸದರಿ ಸ್ಕೆಚನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಮ್ಮ ಭೂಮಿ ದುರುಸ್ತು ಆಗಿರುವುದಿಲ್ಲ, ಆದ ಕಾರಣ ನೀವು ನ್ಯಾಯಾಲಯಕ್ಕೆ ಸ್ಕೆಚನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಮಗೆ ದಾವಾಸ್ತಿ ಎಲ್ಲಿ ಇರುವುದು ಎಂದು ನಿಖರವಾಗಿ ತಿಳಿದಿಲ್ಲ ಆದ ಕಾರಣ ಪ್ರತಿವಾದಿಯ ಜಮೀನನ್ನು ನಿಮ್ಮ ಜಮೀನು ಎಂದು ಪ್ರತಿವಾದಿಗೆ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮಗೆ ಸರ್ವೆ ನಂ.41 ರಲ್ಲಿ ಜಮೀನಿದ್ದು ನೀವು ಸರ್ವೆ ನಂ.41/2 ಎಂದು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನೀವೇ ಪ್ರತಿವಾದಿಯ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ತೊಂದರೆ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆ ಕೊಟ್ಟಿರುವ ವಿಚಾರ ನಿಜ ಆದರೆ ನನಗೆ ದಿನಾಂಕ ನೆನಪಿಲ್ಲ. ಈ ವಿಚಾರದ ಬಗ್ಗೆ ಯಾವುದೇ ನ್ಯಾಯ ಪಂಚಾಯತಿ ನಡೆದಿರುವುದಿಲ್ಲ, ನಾನು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ದಾವಾ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನಾನು ಪ್ರತಿವಾದಿ ಅತಿಕ್ರಮ ಪ್ರವೇಶ ಮಾಡಿದ್ದಾರೆ ಹಾಗೂ ಈ ಬಗ್ಗೆ ನ್ಯಾಯಪಂಚಾಯತಿ ನಡೆದಿದೆ, ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ ಎಂಬ ವಿಚಾರಗಳನ್ನು ವಾದಪತ್ರದಲ್ಲಿ ಬರೆಸಿರುವುದಿಲ್ಲ. ಈ ರೀತಿ ವಾದಪತ್ರದಲ್ಲಿ ಬರೆದಿದ್ದರೆ ಅದು ಸುಳ್ಳು ಎಂದರೆ ಸರಿ. ನೀವು ಈ ದಾವೆಯನ್ನು ಯಾರ ಕಾರಣಕ್ಕಾಗಿ ಹೂಡಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿಗಳು ತೊಂದರೆ ನೀಡುತ್ತಿದ್ದರು, ಆದ ಕಾರಣ ಈ ದಾವೆಯನ್ನು ಹೂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ವಾದಪತ್ರದಲ್ಲಿ ತಿಳಿಸಿರುತ್ತೇನೆ. ಪ್ರತಿವಾದಿಗಳು ಸುಮಾರು 10 ಗುಂಟೆಯಷ್ಟು ಒತ್ತುವರಿ ಮಾಡಿರುತ್ತಾರೆ. ಒತ್ತುವರಿ ಮಾಡಿದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಹಾಗೂ ಸರ್ವೆ ಮಾಡಿಸಿರುವುದಿಲ್ಲ. ನಾನು ದಾವಾ ಆಸ್ತಿಯ ಹದ್ದುಬಸ್ತು ಮಾಡಿಸಿರುತ್ತೇನೆ. ನಾನು ಹದ್ದುಬಸ್ತು ಮಾಡಿಸಿರುವ ಬಗ್ಗೆ ದಾಖಲಾತಿಗಳು ಇವೆ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಮಾನ್ಯವಾಗಿ ದುರಸ್ಥು ಆಗದೇ ಇದ್ದ ಭೂಮಿಗೆ ಹದ್ದುಬಸ್ತು ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಭೂಮಿ ದುರಸ್ತು ಆಗದೇ ಇದ್ದ ಕಾರಣ ಯಾವುದೇ ಹದ್ದುಬಸ್ತು ಮಾಡಿರುವುದಿಲ್ಲ, ನೀವು ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆಯರ್ ಸ್ಥಳಕ್ಕೆ ಬಂದು ಯಾರ ಭೂಮಿ ಯಾರಿಗೆ ಸೇರಿರುತ್ತದೆ ಎಂದು ವಿಚಾರಣೆ ಮಾಡಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಪ್ರತಿವಾದಿಗೆ ಸರ್ವೆ ನಂ.41 ರಲ್ಲಿ ಎಷ್ಟು ಭೂಮಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 41/5 ಮತ್ತು 41/3 ರಲ್ಲಿ ಪ್ರತಿವಾದಿಗಳಿಗೆ ತಲಾ 5 ಎಕರೆ ಭೂಮಿ ಇದೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.41/1 ರಲ್ಲಿ ಪ್ರತಿವಾದಿಗಳಿಗೆ 4 ಎಕರೆ ಭೂಮಿ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ದಿಃ13.12.1979 ರಂದು ದೇವಗಳ್ಳಿ ಗ್ರಾಮದ ಪಿ ಪುಟ್ಟರಾಜೇ ಅರಸ್ ರವರಿಂದ ಸರ್ವೆ ನಂ.41/4 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು

ದಿಃ22.01.1986 ರಂದು ಮಾವತ್ತೂರಮ್ಮ ರವರಿಂದ ಸರ್ವೆ ನಂ.41/3 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಿಃ12.09.1977 ರಂದು ಪಾಪಣ್ಣ ರವರಿಂದ ಸರ್ವೆ ನಂ.41/1 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಭೂಮಿಗಳನ್ನು ಪ್ರತಿವಾದಿಗಳ ತಂದೆ ಬಿ ಗೋಪಾಲ್ ರವರು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.ಪ್ರತಿವಾದಿಗಳಿಗೆ ಸರ್ವೆ ನಂ.41 ರಲ್ಲಿ ಒಟ್ಟು 14 ಎಕರೆ ಭೂಮಿ ಇದೆ ಎಂದರೆ ಸರಿಯಲ್ಲ. ಸರ್ವೆಯರ್ ಸರ್ವೆ ನಂ.41/1,41/3,41/4 ರ ಭೂಮಿಯನ್ನು ಹದ್ದುಬಸ್ತು ಮಾಡಲು ಬಂದಿದ್ದರು ಎಂದರೆ ಸರಿ. ನೀವು ಹದ್ದುಬಸ್ತು ಮಾಡಲು ಬಿಡದೇ ಗಲಾಟೆ ಮಾಡಿದ್ದೀರಿ ಎಂದರೆ ಸರಿಯಲ್ಲ. ಅಳತೆ ಮಾಡಲು ಬಿಡದ ಕಾರಣ ಸರ್ವೆ ಇಲಾಖೆಯವರು ನಿಮ್ಮ ಮೇಲೆ ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಒಟ್ಟಾಗಿ 14 ಎಕರೆ ಭೂಮಿಯನ್ನು ದುರಸ್ತು ಮಾಡಿಕೊಂಡು ಅವರ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆಯ ಕಾಲಕ್ಕೆ ದುರಸ್ಥಾಗಿತ್ತು, ಈಗ ಪ್ರತಿವಾದಿಗಳು ತಮ್ಮ ತಮ್ಮ ಭಾಗಕ್ಕೆ ಭಾಗ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗೂ ಹಾಗೂ ನಿಮಗೂ ಯಾವುದೇ ಸಂಬಂಧವಿಲ್ಲ ನೀವೇ ಪ್ರತಿವಾದಿಗಳ 14 ಎಕರೆ ಜಮೀನಿನ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೀನೆ ಎಂದರೆ ಸರಿಯಲ್ಲ. ನೀವು ವಾಸ್ತವಾಂಶವನ್ನು ಮರೆಮಾಚಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ದಾವೆಯನ್ನು ಹೂಡಿದ್ದೀರಿ ಆದ ಕಾರಣ ನೀವು ಕೇಳಿರುವ ಪರಿಹಾರಕ್ಕೆ  ಅರ್ಹರಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ**ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.